

# ಹೊಸ ಪ್ರಪಂಚದಲ್ಲಿ ಹಳೆ ಎಮೋಷನ್!

**ರೋಹಿತ್ ಪದಕಿ ನಿರ್ದೇಶನದ ಎರಡನೇ ಸಿನಿಮಾ 'ರತ್ನನ್ ಪ್ರಪಂಚ' ಅ. 22ಕ್ಕೆ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗುತ್ತಿದೆ. ಮಧ್ಯಮವರ್ಗದ ಕೌಟುಂಬಿಕ ಕಥನದಲ್ಲಿ ಸಂಬಂಧಗಳ ಪುನರುಜ್ಜೀವನದ ಕಥೆಯನ್ನು ನಿರ್ದೇಶಕರು ಹೇಳಹೊರಟಿದ್ದಾರೆ.**

■ **ಪದ್ಮನಾಭ ಭಟ್**

ನಾಲ್ಕು ವರ್ಷಗಳ ಹಿಂದೆ ಮೂರು ಕಥೆಗಳನ್ನಿಟ್ಟುಕೊಂಡು 'ಹೊಂದಿಸಿ ಬರೆಯಿರಿ' ಎಂಬ ಸಿನಿಮಾ ಮಾಡಿದ್ದ ರೋಹಿತ್ ಪದಕಿ, ಈಗ ತಾವು ಕಟ್ಟಿದ 'ರತ್ನನ್ ಪ್ರಪಂಚ'ವನ್ನು ಪ್ರಪಂಚದ ಎದುರು ತೆರೆದಿಡುವ ಸಿದ್ಧತೆಯಲ್ಲಿದ್ದಾರೆ. ಅಕ್ಟೋಬರ್ 22ಕ್ಕೆ ಅಮೆಜಾನ್ ಪ್ರೈಮ್‌ನಲ್ಲಿ 'ರತ್ನನ್ ಪ್ರಪಂಚ' ಬಿಡುಗಡೆಯಾಗಲಿದೆ.

ಧನಂಜಯ್, ಅಚ್ಯುತ್‌ಕುಮಾರ್, ಉಮಾಶ್ರೀ, ಶ್ರುತಿ ಸೇರಿದಂತೆ ಪ್ರತಿಭಾವಂತ ಕಲಾವಿದರ ದಂಡೇ ಇರುವ ಈ ಚಿತ್ರ ಈಗಾಗಲೇ ಸಾಕಷ್ಟು ನಿರೀಕ್ಷೆ ಹುಟ್ಟಿಸಿದೆ.

'ಇತ್ತೀಚೆಗೆ ಮಧ್ಯಮವರ್ಗದ ಭಾವನಾತ್ಮಕ ಫ್ಯಾಮಿಲಿ ಡ್ರಾಮಾ ಇರುವ ಸಿನಿಮಾಗಳು ಬರುವುದು ಕಡಿಮೆಯಾಗಿತ್ತು. ನಾವೆಲ್ಲ ಅಂಥ ಸಿನಿಮಾಗಳನ್ನೇ ನೋಡಿಕೊಂಡು ಬೆಳೆದವರು. ಅವುಗಳಿಂದಲೇ ನಮ್ಮ ಸಂವೇದನೆಗಳನ್ನು ಬೆಳೆಸಿಕೊಂಡವರು. ಹಾಗೆ ಮನುಷ್ಯ ಸಂಬಂಧಗಳನ್ನು ಹೆಣೆಯುವ ಕಥೆಯನ್ನು ಇಟ್ಟುಕೊಂಡು ಸಿನಿಮಾ ಮಾಡಬೇಕು ಎಂಬ ಉದ್ದೇಶದಿಂದಲೇ 'ರತ್ನನ್ ಪ್ರಪಂಚ' ಸಿನಿಮಾ ಮಾಡಿದ್ದೇವೆ. ಈ ಸಿನಿಮಾದಲ್ಲೊಂದು ಒಳ್ಳೆಯ ಜರ್ನಿ ಇದೆ. ಆ ಜರ್ನಿಯಲ್ಲಿ ಬಹಳಷ್ಟು ಸಂಗತಿಗಳಿವೆ' ಎಂದು ರೋಹಿತ್ ತಮ್ಮ ಸಿನಿಮಾದ ಕುರಿತು ಹೇಳುತ್ತಾರೆ.

ಖಳನ ಖದರ್‌ನಲ್ಲಿ ಮಿಂಚುತ್ತಿರುವ ಡಾಲಿ ಧನಂಜಯ್ ಅವರನ್ನೇ ಯಾಕೆ ನಾಯಕನನ್ನಾಗಿ ಮಾಡಿಕೊಂಡಿರಿ ಎಂದು ಕೇಳಿದರೆ, 'ಅವರು ಡಾಲಿ ಆಗುವುದಕ್ಕೂ ಮೊದಲಿನಿಂದಲೂ ನನಗೆ ಗೊತ್ತು' ಎಂದು ನಗುತ್ತಾರೆ ರೋಹಿತ್. 'ಧನಂಜಯ್ ನೀರಿನಂಥ ಕಲಾವಿದ. ಅವರನ್ನು ಯಾವ ಆಕಾರಕ್ಕೆ ಬೇಕಾದರೂ ಒಗ್ಗಿಸಬಹುದು. ಯಾವ ಬಗೆಯ ಪಾತ್ರವನ್ನಾದರೂ ಮಾಡಿಸಬಹುದು. ನಮಗೆ ಅಂಥ ನಟನೇ ಬೇಕಾಗಿತ್ತು. ಹಾಗಾಗಿ ಅವರನ್ನು ಕೇಳಿದೆ. ಕಥೆ ಕೇಳಿದ ಅವರು ತುಂಬ ಖುಷಿಯಿಂದಲೇ ಒಪ್ಪಿಕೊಂಡರು' ಎಂಬ ವಿವರಣೆ ಅವರದ್ದು.

ಉಮಾಶ್ರೀ ಆರು ವರ್ಷಗಳ ನಂತರ ಮತ್ತೆ ಈ ಚಿತ್ರಕ್ಕಾಗಿ ಬಣ್ಣ ಹಚ್ಚುತ್ತಿರುವುದೂ ರತ್ನನ ಪ್ರಪಂಚದ ವಿಶೇಷಗಳಲ್ಲಿ ಒಂದು. ಅವರ ಪಾತ್ರಕ್ಕೆ ಬೇರೆ ಆಯ್ಕೆಗಳೇ ಇರಲಿಲ್ಲವಂತೆ. ಪುಟ್ಟಮಲ್ಲಿಯಂಥ ಸಶಕ್ತ ಪಾತ್ರವನ್ನು ಮತ್ತೆ ತೆರೆಯ ಮೇಲೆ ತರುವ ಉದ್ದೇಶದಿಂದ ರೂಪಿಸಿರುವ ಈ ಪಾತ್ರವನ್ನು ಹಿಂದಿನ ಪುಟ್ಟಮಲ್ಲಿ ಅಷ್ಟೇ ಶಕ್ತಿಶಾಲಿಯಾಗಿ ನಿಭಾಯಿಸಿದ್ದಾರೆ ಎಂಬ ಖುಷಿ ನಿರ್ದೇಶಕರಿಗಿದೆ.

ರೋಹಿತ್ ಮೊದಲ ಸಿನಿಮಾ

